‘ಕ್ಷಮಿಸು, ನೀನು ಈ ತರ ವರ್ತಿಸೋದಾದ್ರೆ ನಾನೂ ನಿನ್ನ ಒಂದು ಕೈ ನೋಡ್ಕೊಳ್ತೀನಿ’ ಬಿಗಿ ಹಿಡಿತದ ಮೇಲೆ ಕೈಗಳನ್ನಿಟ್ಟು ಬಲವಾಗಿ ನೂಕಿದ. ಹಿತೇಶನ ಹಿಡಿತ ಸಡಿಲಿಸಿತು.

‘ಲಹರಿ ಬಗ್ಗೆ ನಿನಗೆ ಗೊತ್ತಿಲ್ಲಾಂತ ಆ ದಿನ ನನ್ನ ಜೊತೆಗೆ ವಾದಿಸ್ದೆ ನೀನು. ಲಹರಿ ಬಗ್ಗೆ ನಿನಗೆ ಏನು ಗೊತ್ತು, ಬೊಗಳು’ ಮಾಂಸಖಂಡಗಳು ಬಿಗಿದುಕೊಂಡಷ್ಟು ಮುಷ್ಟಿ ಬಿಗಿ ಹಿಡಿದು ಪಾಂಬುವಿನ ಕೈ ಹಿಡಿದು ಎಳೆದ ವಿರಹಿ.

‘ನನ್ನ ಶಕ್ತಿ ಪ್ರದರ್ಶನ ನಿನಗೆ ಗೊತ್ತೇ ಇದೆ. ಅದಕ್ಕೆ ಅವಕಾಶ ಮಾಡ್ಬೇಡ’ ದಂಡೆಯ ಮೇಲೆ ದೂರಕ್ಕೆ ನಿಂತಿದ್ದ ಹಳೇಯ ಸಾಂಟ್ರೋ ಕಾರಿನತ್ತ ಮುಖ ಹೊರಳಿಸಿದ ಪಾಂಬು. ವಿರಹಿಯ ಸೆಟೆದುಕೊಂಡಿದ್ದ ನರಗಳು ಸಡಿಲಿಸಿದವು.

‘ಪಾಂಬು, ನೀನೂ ಲಹರಿ ವಿಷಯದಲ್ಲಿ ನಾಟಕ ಮಾಡಿದೋನು. ನೀನು ಒಳ್ಳೆಯವನು ಅನ್ನೋ ತರ ನನ್ನತ್ರ ವರ್ತಿಸಿದೆ. ನಿನ್ನನ್ನು ನಂಬಿದಕ್ಕೆ ನಾನು ಮೋಸ ಹೋಗಿದ್ದೀನಿ. ಆ ವಿಷಯದಲ್ಲಿ ನನಗೆ ನಿನ್ನ ಸಹಾಯ ಬೇಕು. ಶೆಲ್ಲಿ ವಿಷಯ ಗೌಪ್ಯವಾಗಿರುತ್ತೆ’ ಭರವಸೆಯ ಮಾತುಗಳನ್ನು ನೀಡಿದ. ದುಃಖಿತನ ಕಡೆಗೆ ನೋಡಿ ವ್ಯಂಗ್ಯ ನಗು ತೋರಿಸಿದ ಗೆಲುವು ಪಡೆದವನು.

‘ಇವತ್ತು ಸಂಜೆ ಮರಳು ದಿಣ್ಣೆಯ ಬಲಪಾರ್ಶ್ವದ ಕಡೆಗಿರೋ ‘ಬಂಡೆ’ ಹೊಟೇಲ್‌ಗೆ ಬರೋ ಹಾಗಿದ್ರೆ ನಿನಗೆ ಮಾಹಿತಿ ದೊರಕುತ್ತೆ’

‘ಬಂಡೆ?! ಕಾಕುಟ್ಟನ ದರ್ಬಾರು’ ಹಿತೇಶನ ಅವುಡುಗಳು ಅವನಿಗರಿವಿಲ್ಲದಂತೆ ಬಿಗಿದುಕೊಂಡವು. ಮರಳ ರಾಶಿಯಡಿಯಲ್ಲಿ ಹೂತು ಹೋದ ರಹಸ್ಯಗಳಿಗಿಂತಲೂ ಬಂಡೆಯ ಒಳಗಿರುವ ರಹಸ್ಯ ಅನೂಹ್ಯವಾಗಿರುವುದನ್ನು ಬಲ್ಲ ಮುಗ್ಧ ಪ್ರೇಮಿ.

‘ಹೌದು, ಆದರೆ ನಾನು ನಿನ್ನನ್ನು ಕರೆದಿರೋ ವಿಷಯ ನೀನು ತಪ್ಪಿಯೂ ಯಾರಿಗೂ ಹೇಳೋದು ಬೇಡ’ ರಹಸ್ಯ ಕಾಪಾಡುವಂತೆ ಹೇಳಿದ ಹಿತೈಷಿ.

‘ಸರಿ, ನಿನ್ನನ್ನ ನಂಬ್ತೀನಿ. ಮೊದಲಿನ ಹಾಗೆ ಮತ್ತೆ ನನಗೆ ಮೋಸ ಮಾಡ್ದೆ… ನಿನ್ನ ಸಾಯಿಸ್ತೀನಿ, ಪಾಂಬು. ನನ್ನ ವಿಷಯ ನಿನಗೆ ಗೊತ್ತಲ್ಲ?’ ಸಿಟ್ಟು, ಅಸಹನೆಯ ಕಿಡಿ ಅವನ ಕಣ್ಣುಗಳಲ್ಲಿ ಗೋಚರಿಸುತ್ತಿತ್ತು.

ಪಾಂಬು ಭರವಸೆಯನ್ನು ನೀಡುವಂತೆ ಪ್ರತಿಕ್ರಿಯಿಸಿದ.

ಕಡಲಿನ ಭೋರ್ಗರೆತ ಇನ್ನಷ್ಟು ತೀವ್ರತೆ ಪಡೆಯಿತು. ಪಾಂಬು ಗಾಳಿಗೆ ಹಾರಾಡುತ್ತಿದ್ದ ಕೂದಲನ್ನು ಕೈಗಳಿಂದ ಸರಿಸುವ ಪ್ರಯತ್ನವನ್ನು ಮಾಡುತ್ತಿದ್ದರೂ ಸಾಧ್ಯವಾಗಲಿಲ್ಲ. ಹಿತೇಶನ ದೃಷ್ಟಿ ಅವನು ಕಾರಿನತ್ತ ನಡೆಯುವವರೆಗೂ ಸಾಗಿತ್ತು. ತಿಳಿಯಾದ ಕೊಳದ ಮೇಲೆ ಕಲ್ಲು ಎಸೆದಂತೆ ಕಾಕುಟ್ಟನ ನೆನಪು ಮೂಡಿತು.

ಲಹರಿಯ ವಿಷಯದಲ್ಲಿ ಅನಗತ್ಯ ಮೂಗು ತೂರಿಸಿದವನು. ಅದಕ್ಕೆ ಅವಕಾಶ ಮಾಡಿಕೊಟ್ಟದ್ದು ತಾನೆ. ಉಗುಳು ನುಂಗಿಕೊಂಡ ಲಹರಿಯ ಪ್ರೇಮಿ.

ಮರಳ ದಿಣ್ಣೆಯ ಮೋಹಕ್ಕೆ ಹೇತುವಾದ ತಮ್ಮಿಬ್ಬರ ಪ್ರೇಮ ಪುರಾಣ. ಎಲ್ಲೋ ಒಮ್ಮೆ ನೋಡಿದ ಕಣ್ಣು ಕುಕ್ಕುವ ಸೌಂದರ್ಯ. ಸಂಜೆಯ ಸೂರ್ಯನ ತಂಪಿಗೆ, ಸಾಗರದ ನವಿರು ಭೋರ್ಗರೆತದ ಇಂಪಿಗೆ ಮೆತ್ತನೆಯ ಹಾಸಿಗೆಯಂತಹ ಮರಳ ಮೇಲಿನ ನಡುಗೆಗೆ ಸಾಥ್ ನೀಡಿದ್ದ ಪ್ರೇಮಿಕೆ!

ಲಹರಿ!

ಮನದ ಗೋಡೆಯ ಮೇಲೆ ಅಚ್ಚಳಿಯದೆ ಕೊರೆದ ಪ್ರೇಮ ವಲ್ಲರಿ! ದಿನ ನಿತ್ಯದ ಕನಸುಗಳಿಗೆ ಇಂಬುಕೊಟ್ಟ ಮಾತಿನ ಕಿನ್ನರಿ!

ಎಲ್ಲವೂ ಮರೆಯಾಗಿ ಬದುಕು ಶೂನ್ಯವಾದಾಗ ಆಸರೆ ನೀಡಿದ ಮಾಯೆಯ ಹೆಣ್ಣು!

‘ಇದು ಸತ್ಯ ಹಿತೂ. ನನ್ನ ಮಾತಿನ ಮೇಲೆ ನಿನಗೆ ನಂಬಿಕೇನೇ ಇಲ್ವಾ? ಈ ಸಾಗರದಾಣೆಗೂ ಸತ್ಯ’ ಹಿತೇಶನ ಕೊರಳ ಸುತ್ತಾ ಕೈಯಿಕ್ಕಿ ಹೂಮುತ್ತು ಕೆನ್ನೆಗೆ ಒತ್ತಿದ್ದಳು. ಹಿತೇಶ ಪುಳಕಿತನಾಗಿದ್ದ. ಅದ್ಯಾವ ಮಾಯೆಯೋ ಬೇಡವಾಗಿದ್ದ ಬದುಕನ್ನು ಮತ್ತೆ ಚಿಗುರುವಂತೆ ಮಾಡಿದ್ದ ಮಾಯಾಂಕಿತೆ!

ಸಾಗರವೇ ಸಾಕ್ಷಿಯಾದಂತೆ ಅವಳ ಪ್ರೇಮವನ್ನು ಒಪ್ಪಿಕೊಂಡಿದ್ದ. ಆದರೆ… ಬದುಕು ಕಟ್ಟಿಕೊಳ್ಳುವ ಸಂಭ್ರಮ ಹೆಚ್ಚು ಸಮಯ ಉಳಿಯಲಿಲ್ಲ. ಲಹರಿ…?

ಲಹರಿ ಓದಲಾರದಷ್ಟು ಚಿಂದಿಯಾಗಿತ್ತು. ಅನೂಹ್ಯ ವ್ಯೂಹದೊಳಗೆ ನುಗ್ಗಿ ಕಂಗಾಲಾದ ಬಡಪಾಯಿಯಂತೆ ಪ್ರೇಮದ ಹೂವು ಪಕಳೆಗಳನ್ನು ಉದುರಿಸಿತ್ತು. ಆದರೂ ಒಂದು ಆಸೆ… ಪ್ರೇಮಕ್ಕೆ ಸಾವಿಲ್ಲ, ಪ್ರೇಮಿಗಿದ್ದರೂ… ಆ ಆಶಾದಾಯಕ ಭರವಸೆಯೇ ಮರಳುದಿಣ್ಣೆಯ ಮೇಲೆ ಅಲೆದಾಡಿಸುತ್ತಿದೆ.

ದಿಣ್ಣೆಯ ಮೇಲಿದ್ದ ಸಾಂಟ್ರೋ ಕಾರು ಕಪ್ಪು ಹೊಗೆಯುಗುಳುತ್ತಾ ಸಾಗಿದ್ದೂ ಗೋಚರಿಸಲಿಲ್ಲ. ತೆರೆಗಳ ಆರ್ಭಟದ ನಡುವೆ ಮನಸ್ಸು ಕನಲಿ ಹೋಗುವಷ್ಟು ನೆನಪುಗಳು ಕೊರೆದವು. ಆಯಾಸ ಜೊತೆಗೆ ಹೊಟ್ಟೆಯ ತಳಮಳ ದಡದಿಂದ ಮೇಲಕ್ಕೆ ಅವನನ್ನು ಎಳೆಯಿತು. ಹೆಜ್ಜೆಗಳನ್ನು ಸರಿಸುತ್ತಾ ದಿಣ್ಣೆಯ ಮೇಲಿನ ಟಾರು ರಸ್ತೆಯತ್ತ ಸಾಗಿದ.

ಬೇಡವೆಂದರೂ ದೃಷ್ಟಿ `ಬಂಡೆ'ಯತ್ತ ಸುಳಿಯಿತು. ನಿಗೂಢಗಳ ಮಹತ್ತಾಣ! ಮೋಸದ ಜಾಲ! ವರ್ಣಮಯ ಬದುಕಿನ ಗುಂಗಿನಲ್ಲಿ ಕಳೆದು ಹೋಗುವ ಮಾನ, ಹಣ, ಪ್ರಾಣ. ಪ್ರಭಾಕರನ ಮಾತಿನ ಭರವಸೆಗೆ ಮತ್ತೆ ಆ ಲೋಕದತ್ತ ಸಂಜೆಯ ಪಯಣ! ಮೈ ಮೆಲ್ಲಗೆ ಕಂಪಿಸಿತು. ಧೃತಿಗೆಡಬಾರದು. ಜೊತೆಗೆ ಪ್ರಭಾಕರನಿದ್ದಾನೆ. ಎಚ್ಚರದಿಂದಿದ್ದರೆ ಯಾವ ಅಪಾಯವೂ ತಟ್ಟದು.

ರಸ್ತೆಯ ಬದಿಗಿದ್ದ ಗಾಳಿ ಮರದ ತೋಪಿನತ್ತ ಹೆಜ್ಜೆ ಹಾಕಿದ ಹಿತೇಶ. ಕೆಳಗೆ ಮರಳಿನ ಬಿಸಿ, ಮೇಲೆ ಸೂರ್ಯನ ಬಿಸಿಲು. ಇವುಗಳ ನಡುವೆಯೂ ದೇಹಕ್ಕೆ, ಮನಸ್ಸಿಗೆ ತಂಪು ನೀಡುವ ಗಾಳಿಮರಗಳ ಸುಂಯ್ಯ್ ಶಬ್ದದ ತಂಗಾಳಿ. ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ಬಿಡಬೇಕೆನಿಸಿತು. ಮರಗಳ ನೆರಳಿಗೆ ಮೈಚೆಲ್ಲಿ ಕುಳಿತ.

ಪಾಂಬುವಿನ ಮಾತು ಸತ್ಯ. ತನಗೆ ಮರಳ ದಿಣ್ಣೆ ಅಪಾಯದ ತಾಣ! ಅವನಿಗೆ ತನ್ನ ಬಗ್ಗೆ ಗೊತ್ತಿದೆ. ಲಹರಿಯ ಬಗ್ಗೆಯೂ. ಮುಂಬರುವ ಅಪಾಯವನ್ನು ಗುರುತಿಸಿಯೇ ತನ್ನನ್ನು ಎಚ್ಚರಿಸಿದ್ದಾನೆ. ಇಲ್ಲಿ ಆರಾಮವಾಗಿ ಕುಳಿತಿರುವುದು ಕೂಡ ಅಪಾಯವೆ! ಸುತ್ತಲೂ ದೃಷ್ಟಿಸಿದ. ದೂರದಲ್ಲಿ ಭೋರ್ಗರೆತದ ಸದ್ದು. ಹತ್ತಿರದಲ್ಲಿ ಗಾಳಿಮರಗಳ ಸದ್ದು. ಮತ್ತೆಲ್ಲೂ ಅಪಾಯವಿಲ್ಲ. ಸಮುದ್ರದತ್ತ ಮುಖ ಹೊರಳಿಸಿದ. ಅಗಾಧ ಜಲರಾಶಿಯ ಬಗ್ಗೆ ಕುತೂಹಲ. ಎದ್ದು ನಿಂತ.

ಲಹರಿ ಕೂಡ ಉಳಿಸಿದ ರಹಸ್ಯ! ಕುತೂಹಲಕ್ಕೆ ಇನ್ನಷ್ಟು ಇಂಬು ಕೊಟ್ಟಂತೆ…

* * *

## ‘ಬಂಡೆ’ಯ ಬಳಿ ರಾಜಧಾನಿ

ಇನ್ಸ್‌ಪೆಕ್ಟರ್ ರಾಜಧಾನಿಯ ಬಿಳಿಯ ಪಲ್ಸರ್ ‘ಬಂಡೆ’ಯ ಬಳಿ ನಿಲ್ಲುತ್ತಲೇ, ಪಿಲಿಯನ್ನಲ್ಲಿ ಕುಳಿತಿದ್ದ ಪಿಸಿ ಸಾರಂಗ ಕೆಳಗಿಳಿದ. ಸಮುದ್ರದ ತೆರೆಗಳ ಸದ್ದು ಇನ್ಸ್‌ಪೆಕ್ಟರ್ ಮಾತುಗಳನ್ನು ಮುಚ್ಚಿದಂತೆ ಕಂಡಿತು. ಕುತೂಹಲದ ನೋಟ ಸಮುದ್ರದ ನೀಲ ಬಣ್ಣಗಳತ್ತ ಸರಿಯಿತು. ಸಮುದ್ರಕ್ಕೂ ಕತ್ತಲು ಆವರಿಸಿದಂತೆ ನೀಲ ಬಣ್ಣ ಕಡು ನೀಲಿಗೆ ತಿರುಗಿ ಇನ್ನೇನು ಕೃತಕ ಬೆಳಕು ಮರಳು ದಿಣ್ಣೆಯನ್ನು ಆವರಿಸುವಂತೆ ಕಂಡಿತು. ದೂರದ ದೀಪಸ್ತಂಭದ ಬೆಳಕು ಸರ್ಕಸ್‌ನ ಫ್ಲ್ಯಾಷ್ ಲೈಟ್‌ನಂತೆ ಬೆಳಗಿ ಸಮುದ್ರದಲ್ಲಿ ತೇಲುವ ವಾಹನಗಳಿಗೆ ಮಾರ್ಗಸೂಚಿಯಾಯಿತು.

ಇನ್ಸ್‌ಪೆಕ್ಟರ್ ರಾಜಧಾನಿ ಬೈಕ್‌ಗೆ ಸ್ಟಾಂಡ್ ಹಾಕಿ, ಚಾವಿ ತಿರುಗಿಸಿ ತೆಗೆದ.

‘ಸಾರಂಗ, ಫೈಲ್, ಪೇಪರ್‌ಗಳೆಲ್ಲಾ ತಂದಿದ್ದೀಯಲ್ಲವೆ?’ ಪಿಸಿ ಸಾರಂಗನ ನಿಯತ್ತಿನ ಬಗ್ಗೆ ಗೊತ್ತಿದ್ದರೂ ಸುಮ್ಮನೆ ಪ್ರಶ್ನಿಸಿದ. ಸಮುದ್ರದ ನೀರಿನ ಆಟದತ್ತಲೇ ಗಮನವಿರಿಸಿದ ಪಿಸಿಗೆ ಅವನ ಮಾತು ಕೇಳಿಸಿದಂತಿಲ್ಲ. ಬೂಟುಗಾಲನ್ನು ಕೊಡವಿ ಸಾಕ್ಸ್‌ವರೆಗೆ ಏರಿದ್ದ ಯೂನಿಫಾರಂನ ಕೆಳತುದಿಯನ್ನು ಸರಿಪಡಿಸಿದ.

‘ಪಿಸಿ, ಫೈಲ್ ರೆಡಿ ತಾನೆ?’ ಸಾರಂಗನ ಕೈಯಲ್ಲಿದ್ದ ಫೈಲಿನತ್ತ ನೋಡುತ್ತಲೇ ಮಗದೊಮ್ಮೆ ಕೇಳಿದ. ಸ್ಟೇಶನ್ನಲ್ಲಿಯೂ ವಟಗುಟ್ಟಲೇ ಇರುವ ಇನ್ಸ್‌ಪೆಕ್ಟರ್‌ಗೆ ಉತ್ತರಿಸಿ ಉತ್ತರಿಸಿ ಪಿಸಿಯ ಕಿವಿಗಳು ತೂತು ಬಿದ್ದಂತಾಗಿತ್ತು. ಪೂರಕವಾಗಿ ಸಮುದ್ರದ ಮೊರೆತ. ಉಬ್ಬರವಿರದಿದ್ದರೂ ಇಳಿತದ ಸದ್ದೇನು ಕಡಿಮೆಯಿಲ್ಲದ್ದು.

‘ಸಾರ್, ಯಾವ ಫೈಲ್?’ ಏನೂ ಗೊತ್ತಿಲ್ಲದಂತೆ ಪ್ರಶ್ನಿಸಿದ ಪಿಸಿಯತ್ತ ರಾಜಧಾನಿ ಕಣ್ಣು ಅರಳಿಸಿ ನೋಡಿದ.

**(ಸಶೇಷ)**